# Telephonic Conversation between PM and Amir of the State of Qatar

March 26, 2020

---

## ಕತಾರ್ ರಾಜ್ಯದ ಪ್ರಧಾನಿ ಮತ್ತು ಅಮೀರ್ ನಡುವಿನ ದೂರವಾಣಿ ಸಂಭಾಷಣೆ

ಮಾರ್ಚ್ 26, 2020

ಕತಾರ್ ರಾಜ್ಯದ ಅಮೀರ್ ಹಿಸ್ ಹೈನೆಸ್ ಶೇಖ್ ತಮೀಮ್ ಬಿನ್ ಹಮದ್ ಅಲ್ ಥಾನಿ ಅವರೊಂದಿಗೆ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು ಇಂದು ದೂರವಾಣಿ ಸಂಭಾಷಣೆ ನಡೆಸಿದರು.

ಕೋವಿಡ್-19 ಜಾಗತಿಕ ಸಾಂಕ್ರಾಮಿಕ ರೋಗ ಹಾಗೂ ಅದರ ಸಾಮಾಜಿಕ ಮತ್ತು ಆರ್ಥಿಕ ಪ್ರಭಾವಕ್ಕೆ ಸಂಬಂಧಿಸಿದಂತೆ ನಡೆಯುತ್ತಿರುವ ಬೆಳವಣಿಗೆಗಳ ಬಗ್ಗೆ ಇಬ್ಬರು ನಾಯಕರು ಚರ್ಚಿಸಿದರು. ವೈರಸ್ ಹರಡುವುದನ್ನು ನಿಯಂತ್ರಿಸಲು ಆಯಾ ದೇಶಗಳಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ಅವರು ಟಿಪ್ಪಣಿಗಳನ್ನು ವಿನಿಮಯ ಮಾಡಿಕೊಂಡರು. ಸಾರ್ಕ್ ದೇಶಗಳಲ್ಲಿ ಇತ್ತೀಚಿನ ಪ್ರಾದೇಶಿಕ ಉಪಕ್ರಮಗಳು ಮತ್ತು ಹಿಂದಿನ ದಿನ ಜಿ-20 ನಾಯಕರಲ್ಲಿ ನಡೆದ ವರ್ಚುವಲ್ ಸಭೆಯ ಬಗ್ಗೆ ಪ್ರಧಾನ ಮಂತ್ರಿಯವರು ಹೆಚ್.ಹೆಚ್.ದಿ ಅಮೀರ್ ಅವರಿಗೆ ತಿಳಿಸಿದರು .

ಎಲ್ಲಾ ಪೀಡಿತ ದೇಶಗಳು ರೋಗ ಹರಡುವುದನ್ನು ತಡೆಯಲು ತೆಗೆದುಕೊಳ್ಳುವ ಪ್ರಯತ್ನಗಳನ್ನು ಮತ್ತು ಕ್ರಮಗಳು ಆರಂಭಿಕ ಹಾಗೂ ಸಕಾರಾತ್ಮಕ ಫಲಿತಾಂಶಗಳನ್ನು ನೀಡುತ್ತವೆ ಎಂದು ಇಬ್ಬರು ನಾಯಕರು ಭರವಸೆ ವ್ಯಕ್ತಪಡಿಸಿದರು. ಸಾಂಕ್ರಾಮಿಕ ರೋಗದ ವಿರುದ್ಧ ಹೋರಾಡುವಲ್ಲಿ ಅಂತರರಾಷ್ಟ್ರೀಯ ಒಗ್ಗಟ್ಟಿನ ಮತ್ತು ಮಾಹಿತಿ ಹಂಚಿಕೆಯ ಮಹತ್ವವನ್ನು ಅವರು ಒತ್ತಿ ಹೇಳಿದರು.

ಕತಾರ್‌ನಲ್ಲಿ ವಾಸಿಸುತ್ತಿರುವ ಮತ್ತು ಕೆಲಸ ಮಾಡುತ್ತಿರುವ ಭಾರತೀಯ ಪ್ರಜೆಗಳ ಕಲ್ಯಾಣಕ್ಕೆ, ವಿಶೇಷವಾಗಿ ಪ್ರಸ್ತುತ ಪರಿಸ್ಥಿತಿಯಲ್ಲಿ ತಮ್ಮ ವೈಯಕ್ತಿಕ ಗಮನ ಹರಿಸಿದ್ದಕ್ಕಾಗಿ ಕತಾರ್ ನಲ್ಲಿ ಎಲ್ಲಾ ಭಾರತೀಯ ವಲಸಿಗರ ಸುರಕ್ಷತೆ ಮತ್ತು ಕಲ್ಯಾಣದ ಬಗ್ಗೆ ಪ್ರಧಾನ ಮಂತ್ರಿ ಹೆಚ್ .ಹೆಚ್.ದಿ ಅಮೀರ್ ರವರು ಪ್ರಧಾನ ಮಂತ್ರಿಗೆ ಭರವಸೆ ನೀಡಿದರು.

ವಿಕಸಿಸುತ್ತಿರುವ ಪರಿಸ್ಥಿತಿಯ ಬಗ್ಗೆ ನಿಯಮಿತವಾಗಿ ಸಂಪರ್ಕ ಮತ್ತು ಸಮಾಲೋಚನೆ ನಡೆಸಲು ಪ್ರಧಾನ ಮಂತ್ರಿ ಮತ್ತು ಹೆಚ್.ಹೆಚ್.ದಿ ಅಮೀರ್ ರವರು ಒಪ್ಪಿಕೊಂಡರು

**ನವ ದೆಹಲಿ**
**ಮಾರ್ಚ್ 26, 2020**

DISCLAIMER : This is an approximate translation. The original is available in English on MEA’s website and may be referred to as the official press release.